ಇರೋದ್ರಿಂದ ಯಾರ್‍ಗೂ ಅನುಮಾನ ಬರಲ್ಲ. ಇಲ್ಲಂದ್ರ ನಮ್ಮ ಮರ್ಯಾದಿ ನಾವ ಕಳ್ಕೊಂತಿವಿ. ದೇವ್ರಾಜ ನೀನು ಮನಸಿಗೆ ಹಚ್ಕೊಬ್ಯಾಡ. ನೀನರ ಏನು ಮಾಡ್ಬೇಕು. ದೇವ್ರು ಕೊಟ್ಟಂಗ ಅದಿದಿ. ಇಕಿ ಹೊಟ್ಯಾಗ ಇರೋ ಕೂಸಿನ ಅಪ್ಪ ಯಾರಾದ್ರೂ ಇರ್‍ಲಿ. ಮಂದಿಗಂತ್ರೂ ಗೊತ್ತಾಗಲ್ಲ. ನೀನು ಇನ್ನೊಂದು ಮಾಡಿಕೊಂಡಿದ್ರೂ ತಾಪತ್ರಯ ಅನುಭವಿಸಬೇಕಿತ್ತು. ನಮ್ಮ ಹಿರಿಯರ ಪುಣ್ಯ ಇರ್ಬೇಕು. ಪದ್ಮಾ ನಮ್ಮ ಸೊಸಿ. ನಿನ್ನ ಹೆಂಡತಿ. ಅಕಿ ಹೊಟ್ಯಾಗ ಹುಟ್ಟೋ ಮಗು ಈಗ ನಿಂದಾ ಅನ್ನೋ. ಅಕಿನ ನಾವು ಚೊಲೋತ್ನಾಗ ನೋಡ್ಕೋಬೇಕು. ಇಲ್ಲಾಂದ್ರ ಕೈಯ್ಯಿಗೆ ಬಂದಿದ್ದು ಬಾಯ್ಗೆ ಬರಲ್ಲ. ಚೊಲೋ ನೋಡ್ಕೊಂಡ್ರ ಅಕಿ ತಲಿನೂ ಸುದ್ದಾಗುತ್ತ. ನಮ್ಮ ಮನಿ ಬೆಳಗಾಕ ಒಂದು ಕೂಸುನು ಸಿಗುತ್ತ. ನಾವು ಗಟ್ಟಿ ಧೈರ್ಯ ಮಾಡೋಣ. ಪದ್ಮಾಂದು ತಪ್ಪಿಲ್ಲ. ನಮ್ದೂ ತಪ್ಪಿಲ್ಲ. ಆ ಪರಮಾತ್ಮ ಆಡಿಸಿದಂಗ ಆಡಾಕಂತಿವಿ. ಅಕಿ ಬ್ಯಾರೆದವ್ರಿಗೆ ಬಸುರಿ ಆಗಿದ್ದು ಮರ್ಯಾದೆಗೇಡು ಅಂತ ಅನ್ಕೊಳ್ಳುದು ಬ್ಯಾಡ...' ಅಂತ ಕಡ್ಡಿ ಮುರಿದಂತೆ ಹೇಳಿದಳು. ಗೋವಿಂದನಿಗೂ ತಾಯವ್ವನ ಮಾತು ಸರಿ ಅನಿಸಿತು. ದೇವರಾಜ ಮಾತ್ರ ಏನು

